ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಕ್ರ.ಸಂ. ಸಚುಪ್ರಾ/ಸಿಬ್ಬಂದಿ/ 26/ಮಾ.ಹ./2016-17

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್.
ಶಾಂತಿನಗರ. ಬೆಂಗಳೂರು-5600027
ದಿನಾಂಕ: 23.01.2017

ಅಧಿಸೂಚನೆ

**ವಿಷಯ:-** ಮಾಹಿತಿ ಹಕ್ಕು ಅಧಿನಿಯಮ 2005 ಪ್ರಕರಣ 4(1) (ಬಿ)ರ ಪ್ರಕಾರ ಪ್ರಕಟಣೆ.

ಮಾಹಿತಿ ಹಕ್ಕು ಅಧಿನಿಯಮದ 2005ರ ಪ್ರಕರಣ 2(ಹೆಚ್)(ಸಿ)ರಲ್ಲಿ ವ್ಯಾಖ್ಯಾನಿಸಿರುವಂತೆ ಸಾರ್ವಜನಿಕ ಪ್ರಾಧಿಕಾರವಾದ ಸಹಕಾರ ಚುನಾವಣಾ ಪ್ರಾಧಿಕಾರದ ವತಿಯಿಂದ ಸಾರ್ವಜನಿಕ ಸಾಮಾನ್ಯ ಮಾಹಿತಿಗಾಗಿ ಸದರಿ ಅಧಿನಿಯಮದ ಪ್ರಕರಣ 4(1)(ಬಿ)ರ ಅಡಿಯಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರದ ಮಾಹಿತಿಯನ್ನು ಪ್ರಕಟಿಸಲಾಗಿದೆ.

(ಎನ್.ಸಿ.ಮುನಿಯಪ್ಪ)
ಸಹಕಾರ ಚುನಾವಣಾ **ಆಯುಕ್ತರು**

**ಗೆ,**

**1.ಸರ್ಕಾರದ ಪ್ರದಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01**

**2.ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52**

**3.ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು,**

**4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು,**

**5. ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು,**

# ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು ಈ ಕಾರ್ಯಾಲಯದ, ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 4(1)(B) ರಡಿಯಲ್ಲಿ ಮಾಹಿತಿ

## 4(1) (ಬಿ)(1) ಸಹಕಾರ ಚುನಾವಣಾ ಪ್ರಾಧಿಕಾರದ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರ.

ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ20 ಸಿಎಲ್ಎಂ. 2013 ದಿ:18-3-2013 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಎಎ ರಲ್ಲಿನ ಉಪಕಂಡಿಕೆ (1) ರಲ್ಲಿ ವಿವರಿಸಿರುವ ರೀತ್ಯಾ ಸರ್ಕಾರವು ಅಧಿಸೂಚನೆಯ ಮೂಲಕ ಸಹಕಾರ ಚುನಾವಣಾ ಆಯುಕ್ತರು ಮತ್ತು ಕಾರ್ಯದರ್ಶಿಯನ್ನು ಒಳಗೊಂಡಿರುವ ಸಹಕಾರ ಚುನಾವಣಾ ಆಯೋಗ ರಚಿಸಲಾಗಿದೆ.

ರಾಜ್ಯದ ಘನವೆತ್ತ ರಾಜ್ಯಪಾಲರು ಶ್ರೀ ಎನ್.ಸಿ. ಮುನಿಯಪ್ಪ, ಭಾ.ಆ.ಸೇ. (ನಿವೃತ್ತ) ಇವರನ್ನು ಸಹಕಾರ ಚುನಾವಣಾ ಆಯೋಗದ ಆಯುಕ್ತರನ್ನಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ21 ಸಿಎಲ್ಎಂ 2013 ದಿನಾಂಕ: 8.4.2013 ರಿಂದ ಐದು ವರ್ಷಗಳ ಅವಧಿಗೆ ನೇಮಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 180 ಎಸಸೇ 2013 ದಿ:5-6-2013 ರಲ್ಲಿ ಶ್ರೀ ಬಿ.ಹೆಚ್. ಮಂಜಪ್ಪ, ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರು ಇವರನ್ನು ಸಹಕಾರ ಚುನಾವಣಾ ಆಯೋಗದ ಕಾರ್ಯದರ್ಶಿಯನ್ನಾಗಿ ಮೂರು ವರ್ಷಗಳ ಅವಧಿಗೆ ನೇಮಿಸಿದ್ದು, ಇವರ ಕರ್ತವ್ಯದ ಅವಧಿಯು ದಿನಾಂಕ:04.06.2016ಕ್ಕೆ ಮುಕ್ತಾಯಗೊಂಡಿರುತ್ತದೆ.

ಸಹಕಾರ ಸಂಘಗಳ ಅಧಿನಿಯಮ 39ಎಎ(4)ಕ್ಕೆ, 2014ರಲ್ಲಿ ತಿದ್ದುಪಡಿಯಾಗಿರುವಂತೆ, ರಾಜ್ಯ ಸರ್ಕಾರವು ಸಹಕಾರ ಸಂಘಗಳ ಹೆಚ್ಚುವರಿ ರಿಜಿಸ್ಟ್ರಾರ್ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯಾಗಿರುವ ವ್ಯಕ್ತಿಯೊಬ್ಬರನ್ನು ನೇಮಿಸಬಹುದಾದಂತಹ ಅವಧಿಗಾಗಿ ಸಹಕಾರ ಚುನಾವಣಾ ಪ್ರಾಧಿಕಾರದ ಕಾರ್ಯದರ್ಶಿಯಾಗಿ ನೇಮಕ ಮಾಡತಕ್ಕದ್ದಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ 171 ಎಸಸೇ 2016 ದಿ:19-8-2016 ರನ್ವಯ ಶ್ರೀಮತಿ ನುಸರತ್ ಮುವಾಹಿದಾ ಬೇಗಂ, ಸಹಕಾರ ಸಂಘಗಳ ಅಪರ ನಿಬಂಧಕರು ಇವರನ್ನು ಸಹಕಾರ ಚುನಾವಣಾ ಪ್ರಾಧಿಕಾರದ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ.

ಅಧಿಸೂಚನೆ ಸಂಖ್ಯೆ ಸಂ.ವ್ಯ.ಶಾಇ/58/ಶಾಸನ/2014 ದಿನಾಂಕ: 06.09.2014 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 39 ಎಎ ಗೆ ತಿದ್ದುಪಡಿ ಮಾಡಿದ್ದು "ಸಹಕಾರ ಚುನಾವಣಾ ಆಯೋಗ" ಎಂಬುದನ್ನು "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬುದಾಗಿರುತ್ತದೆ.

## ಸಹಕಾರ ಚುನಾವಣಾ ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಕರ್ತವ್ಯಗಳು:-

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಎ(1) ರಲ್ಲಿ ತಿಳಿಸಿರುವಂತೆ, ಯಾವುದೇ ಸಹಕಾರ ಸಂಘದ ಆಕಸ್ಮಿಕ ಖಾಲಿ ಸ್ಥಾನವನ್ನು ಒಳಗೊಂಡಂತೆ ಸಾಮಾನ್ಯ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುವುದು. ಪ್ರಕರಣ 39ಎಎ(2)ರನ್ವಯ ಸಹಕಾರ ಸಂಘಗಳಿಗೆ ನಡೆಸುವ ಮತ್ತು ತತ್ಸಂಬಂಧವಾದ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು

--2

ನಿಯಂತ್ರಣವು ಸಹಕಾರ ಚುನಾವಣಾ ಪ್ರಾಧಿಕಾರದ ಕರ್ತವ್ಯವಾಗಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅದಿನಿಯಮ 1997 ರ ಪ್ರಕರಣ 26-ಎ ರನ್ವಯ ಸಂಯುಕ್ತ ಸಹಕಾರಿಯೂ ಸೇರಿದಂತೆ ಸಹಕಾರಿಗಳಿಗೆ ಸಂಬಂಧಿಸಿದಂತೆ ಅಧಿನಿಯಮದಡಿ ಪ್ರದತ್ತವಾದ ಅಧಿಕಾರ ಹೊಂದಿದ್ದು ಅದೇ ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 39-ಎ(2)ರ ರೀತ್ಯಾ ಸಹಕಾರ ಸಂಘಗಳ ಮಂಡಲಿಗಳ ಸದಸ್ಯರ ಸಾಮಾನ್ಯ ಚುನಾವಣೆಗಳನ್ನು ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತದೆ.

1) ಪ್ರಾಥಮಿಕ ಸಹಕಾರ ಸಂಘಗಳು
2) ಪ್ರೌಢ ಸಹಕಾರ ಸಂಘಗಳು
3) ಸಂಯುಕ್ತ ಸಹಕಾರ ಸಂಘಗಳು
4) ಅಗ್ರ (ಅಪೆಕ್ಸ) ಸಹಕಾರ ಸಂಘಗಳು

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 226 ಸಿಎಲ್ಎಂ 2014 ದಿ:6-6-2015 ರನ್ವಯ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ತಿದ್ದುಪಡಿ ಮಾಡಲಾದ ನಿಯಮ 13 ಬಿಬಿ ರಂತೆ ಸಹಕಾರ ಚುನಾವಣಾ ಪ್ರಾಧಿಕಾರವು ಪ್ರತಿ ಜಿಲ್ಲಾ/ಪ್ರಾಂತ್ಯ ಮತ್ತು ರಾಜ್ಯಮಟ್ಟದ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ನಿಗದಿತ ಅವಧಿಗೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗುತ್ತದೆ. ಫೆಡರಲ್ ಮತ್ತು ಅಪೆಕ್ಸ ಸಹಕಾರ ಸಂಘಗಳಿಗೆ ಚುನಾವಣಾಧಿಕಾರಿಗಳು ಸಾಮಾನ್ಯವಾಗಿ ಕಂದಾಯ ಇಲಾಖೆಯವರಾಗಿದ್ದು ಹಾಗೂ ಇತರೆ ಸಂಘಗಳಿಗೆ ಸಹಕಾರ ಇಲಾಖೆಯವರಾಗಿರುತ್ತಾರೆ. ನಿಯಮ 13ಇ ಗೆ ತಿದ್ದುಪಡಿಯಾಗಿದ್ದು, ಇದರನ್ವಯ, ಪ್ರೌಢ, ಫೆಡರಲ್, ಮತ್ತು ಅಗ್ರ (ಅಪೆಕ್ಸ) ಸಹಕಾರ ಸಂಘಗಳ ಚುನಾವಣೆಗೆ ಸಂಬಂಧಿಸಿದಂತೆ ಸಹಕಾರ ಚುನಾವಣಾ ಪ್ರಾಧಿಕಾರವು ಮತ್ತು ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, ಆಯಾ ಕಾರ್ಯವ್ಯಾಪ್ತಿಯ ಚುನಾವಣಾಧಿಕಾರಿಗಳು ರಿಟರ್ನಿಂಗ್ ಅಧಿಕಾರಿಗಳನ್ನು ಹಾಗೂ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸುತ್ತಾರೆ.

## 4(1)(B) (II)ಪ್ರಾಧಿಕಾರದ ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳು ಹಾಗೂ ಕರ್ತವ್ಯಗಳು:-

ಸರ್ಕಾರದ ಆದೇಶ ಸಂಖ್ಯೆ: ಸಇ 217 ಎಸಸೇ 2013, ಬೆಂಗಳೂರು ದಿನಾಂಕ: 6-7-2013 ರನ್ವಯ ಪ್ರಾಧಿಕಾರಕ್ಕೆ, ವಿವಿಧ ಪದನಾಮದ ಒಟ್ಟು 23 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಮತ್ತು ಟೆಕ್ನೋ ಕನ್ಸಲ್ಟೆಂಟ್ / ಡಾಟಾ ಎಂಟ್ರಿ ಆಪರೇಟರ್ಸ್ / ವಾಹನ ಚಾಲಕರು / ಅಟೆಂಡರ್ಸ್‌ಗಳ ಒಟ್ಟು 12 ಹುದ್ದೆಗಳನ್ನು ಮಾನವ ಸಂಪನ್ಮೂಲ ಬಾಹ್ಯ ಮೂಲಗಳಿಂದ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಇ 436 ಎಸಸೇ 2015 ಬೆಂಗಳೂರು ದಿ:24-5-2016 ರಲ್ಲಿ ಪ್ರಾಧಿಕಾರಕ್ಕೆ ಈಗಾಗಲೇ ಮಂಜೂರಾಗಿದ್ದ ಒಟ್ಟು 23 ಹುದ್ದೆಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡದೇ, ಹುದ್ದೆಗಳನ್ನು ಮರುಪದನಾಮಗೊಳಿಸಿ ವೇತನ ಶ್ರೇಣಿಗಳನ್ನು ಮಂಜೂರು ಮಾಡಲಾಗಿದ್ದು, ಸದರಿ ಪರಿಷ್ಕೃತ ಸಿಬ್ಬಂದಿ ವೃಂದಬಲ ಈ ಕೆಳಗಿನಂತಿದೆ.

| ಕ್ರಸಂ | ಹುದ್ದೆಯ ವಿವರ | ಹುದ್ದೆಗಳ ಸಂಖ್ಯೆ | ವೇತನಶ್ರೇಣಿ |
|---|---|---|---|
| 1 | ಕಾರ್ಯದರ್ಶಿ | 01 | 48900–63600 |
| 2 | ಉಪಕಾರ್ಯದರ್ಶಿ | 01 | 40050–56550 |
| 3 | ಸಹಕಾರ ಸಂಘಗಳ ಜಂಟಿ ನಿಬಂಧಕರು ಅಥವಾ ಸಮಾನಾಂತರ ಹುದ್ದೆ (ಚುನಾವಣಾ ವಿಭಾಗ) | 01 | 40050–56550 |
| 4 | ಸಹಕಾರ ಸಂಘಗಳ ಉಪನಿಬಂಧಕರು/ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು ಅಥವಾ ಸಮಾನಾಂತರ ಹುದ್ದೆ | 01 | 36300–53850 |
| 5 | ಕಾನೂನು ಅಧಿಕಾರಿ/ ಲೆಕ್ಕಾಧಿಕಾರಿ ಅಥವಾ ಸಮಾನಾಂತರ ಹುದ್ದೆ | 01 | 22800–43200 |
| 6 | ಸಹಕಾರ ಸಂಘಗಳ ಸಹಾಯಕ ನಿಬಂಧಕರು | 06 | 22800–43200 |
| 7 | ಲೆಕ್ಕಾಧಿಕಾರಿ | 01 | 22800–43200 |
| 8 | ಸಹಕಾರ ಅಭಿವೃದ್ಧಿ ಅಧಿಕಾರಿ/ ಲೆಕ್ಕಾಧೀಕ್ಷಕರು | 02 | 21600–40050 |
| 9 | ಕಾರ್ಯನಿರ್ವಾಹಕ ಸಹಾಯಕರು/ ಅಧೀಕ್ಷಕರು | 01 | 20000–36000 |
| 10 | ಹಿರಿಯ ನಿರೀಕ್ಷಕರು/ ಹಿರಿಯ ಲೆಕ್ಕಪರಿಶೋಧಕರು | 04 | 17650–32000 |
| 11 | ಪ್ರಥಮ ದರ್ಜೆ ಸಹಾಯಕರು/ ಶೀಘ್ರಲಿಪಿಗಾರರು | 02 | 14550–26700 |
| 12 | ದ್ವಿತೀಯ ದರ್ಜೆ ಸಹಾಯಕರು | 02 | 11600–21000 |
| | **ಒಟ್ಟು ಹುದ್ದೆಗಳು** | **23** | |

ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ಅಧಿಕಾರ ಹಾಗೂ ಕರ್ತವ್ಯಗಳು ಈ ಕೆಳಗಿನಂತಿದೆ.

## I. ಆಡಳಿತ ಮತ್ತು ಸಿಬ್ಬಂದಿ ವಿಭಾಗ /ಲೆಕ್ಕ ಪತ್ರ ವಿಭಾಗ

ಅ. ಉಪಕಾರ್ಯದರ್ಶಿ:–

1) ಆಡಳಿತ ಮತ್ತು ಸಿಬ್ಬಂದಿ/ಲೆಕ್ಕ ಪತ್ರ ವಿಭಾಗದಮುಖ್ಯಸ್ಥರು.
2) ಆಡಳಿತ ಮತ್ತು ಸಿಬ್ಬಂದಿ ಹಾಗೂ ಲೆಕ್ಕಪತ್ರ ವಿಭಾಗದ ಸಿಬ್ಬಂದಿಯವರ ಒಟ್ಟಾರೆ ಕೆಲಸದ ಮೇಲ್ವಿಚಾರಣೆ.
3) ಲೆಕ್ಕಪತ್ರ ಶಾಖೆಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಖಜಾನೆ ಮತ್ತು ಬ್ಯಾಂಕ್ ಖಾತೆ ವ್ಯವಹಾರದ ಮೇಲ್ವಿಚಾರಣೆ ಮತ್ತು ಲೆಕ್ಕಪತ್ರಗಳ ನಿರ್ವಹಣೆ.

ಆ. ಅಕೌಂಟ್ಸ್ ಆಫೀಸರ್:-

1) ಲೆಕ್ಕಪತ್ರ ವಿಭಾಗದ ವಿಷಯ ನಿರ್ವಾಹಕರ ಮೇಲ್ವಿಚಾರಣೆ.

2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ನಿಯಮಾನುಸಾರ ಕ್ರಮವಾಗಿ ಬರೆಯುವುದು.

3) ಖಜಾನೆ ಮತ್ತು ಬ್ಯಾಂಕ್ ಖಾತೆಗಳ ನಿರ್ವಹಣೆ.

ಇ. ಅಧೀಕ್ಷಕರು :-

1) ಆಡಳಿತ ಮತ್ತು ಸಿಬ್ಬಂದಿ ವಿಭಾಗದ ಕಡತಗಳ ನಿರ್ವಹಣೆ.

2) ತಮ್ಮ ಅಧೀನದಲ್ಲಿರುವ ಸಿಬ್ಬಂದಿಯ ಕೆಲಸದ ಮೇಲ್ವಿಚಾರಣೆ.

3) ಪ್ರಾಧಿಕಾರದ ಗ್ರಂಥಾಲಯ ಮತ್ತು ಪುಸ್ತಕಗಳ ಸ್ಟಾಕ್ ಪುಸ್ತಕ ಮತ್ತು ರಿಜಿಸ್ಟರ್ ಹಾಗೂ ಪ್ರಾಧಿಕಾರದ ಸ್ವತ್ತುಗಳ ರಿಜಿಸ್ಟರ್‌ಗಳನ್ನು ಕ್ರಮವಾಗಿ ಬರೆಯುವುದು.

ಈ. ಹಿರಿಯ ನಿರೀಕ್ಷಕರು / ಹಿರಿಯ ಲೆಕ್ಕಪರಿಶೋಧಕರು

ಲೆಕ್ಕಪತ್ರ ವಿಭಾಗದ ಕಡತಗಳ ನಿರ್ವಹಣೆ.

**II. ಚುನಾವಣಾ ವಿಭಾಗ** :

ಅ. ಜಂಟಿ ನಿಬಂಧಕರು :-

1) ಪ್ರಾಧಿಕಾರದ ಚುನಾವಣಾ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಕೆಲಸ ಕಾರ್ಯಗಳ ನಿರ್ವಹಣೆಯ ಮುಖ್ಯಸ್ಥರು.

2) ಆಡಳಿತ ಮತ್ತು ಸಿಬ್ಬಂದಿ ವಿಭಾಗದ ಕೆಲಸ ಕಾರ್ಯಗಳನ್ನು ಹೊರತುಪಡಿಸಿ ಉಳಿದಂತೆ ಚುನಾವಣೆಗೆ ಸಂಬಂದಪಟ್ಟ ಪ್ರಾಧಿಕಾರದ ಇತರೆ ಅಧಿಕಾರಿಗಳು / ಸಿಬ್ಬಂದಿಗಳು / ಹೊರಗುತ್ತಿಗೆ ಸಿಬ್ಬಂದಿಗಳು / ಇವರುಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ.

3) ಚುನಾವಣೆಗೆ ಬಾಕಿ ಇರುವ ಎಲ್ಲಾ ರೀತಿಯ ಸಹಕಾರ ಸಂಘಗಳ / ಸಹಕಾರಿಗಳ ಮಾಹಿತಿಗಳನ್ನು ಮಾಹಿತಿ ತಂತ್ರಜ್ಞಾನ ವಿಭಾಗದ ನೆರವಿನೊಂದಿಗೆ ಸಂಗ್ರಹಿಸುವುದು. ಪ್ರತಿ ವರ್ಷ ಸಹಕಾರ ಸಂಘಗಳ ಅಧಿನಿಯಮ 39ಎ(2)ರಂತೆ ಸಾಮಾನ್ಯ ಚುನಾವಣೆಸಕಾಲಕ್ಕೆ ನಡೆಸಲು ಮತ್ತು ಪೂರ್ವಭಾವಿಯಾಗಿ ಅಧಿಸೂಚನೆಗಳನ್ನು ಹೊರಡಿಸಲು ಹಾಗೂ ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಲು ಕ್ರಮಕೈಗೊಳ್ಳುವುದು.

ಆ. ಉಪ ನಿಬಂಧಕರು :-

1) ಚುನಾವಣೆಗೆ ಸಂಬಂದಪಟ್ಟ ಪ್ರಾಧಿಕಾರದ ಇತರೆ ಅಧಿಕಾರಿಗಳು / ಸಿಬ್ಬಂದಿಗಳು / ಹೊರಗುತ್ತಿಗೆ ಸಿಬ್ಬಂದಿಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ.

2) ಚುನಾವಣೆಗಳಿಗೆ ಸಂಬಂಧಪಟ್ಟಂತೆ ಜಂಟಿ ನಿಬಂಧಕರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ನೆರವು ನೀಡುವುದು.

ಇ. ಸಹಾಯಕ ನಿಬಂಧಕರು:-

1) ಚುನಾವಣಾ ವಿಭಾಗದ ಮುಖ್ಯಸ್ಥರಾದ ಜಂಟಿ ಮತ್ತು ಉಪ ನಿಬಂಧಕರ ಮೇಲ್ವಿಚಾರಣೆಯಲ್ಲಿ ಚುನಾವಣೆಗೆ ಸಂಬಂಧಪಟ್ಟಂತೆ ಎಲ್ಲಾ ರೀತಿಯ ಕೆಲಸ ನಿರ್ವಹಿಸುವುದು.

2) ಸ್ವೀಕೃತಿ ಶಾಖೆಯಿಂದ ಪಡೆದ ಪತ್ರಗಳನ್ನು ಪರಿಶೀಲಿಸಿ ವಿಷಯ ನಿರ್ವಾಹಕರಿಗೆ ಕಳುಹಿಸಿ ಅವುಗಳ ಬಗ್ಗೆ ಸಕಾಲಿಕ ಕ್ರಮ ಕೈಗೊಳ್ಳುವುದು.

ಈ. ಸಹಾಯಕ ನಿಬಂಧಕರು (ಆಡಳಿತ ಮತ್ತು ಸಿಬ್ಬಂದಿ)

ಆಯುಕ್ತರು ಹಾಗೂ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರಾಗಿ ಕಾರ್ಯನಿರ್ವಹಿಸುವುದು.

ಉ. ಲೀಗಲ್ ಆಫೀಸರ್

ಚುನಾವಣೆಗೆ ಸಂಬಂಧಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ/ನಿಯಮ ಮತ್ತು ಸಂಘಗಳ ಬೈಲಾಗಳಿಗೆ ಅನುಗುಣವಾಗಿ ಕಾನೂನು ಅಭಿಪ್ರಾಯ ನೀಡುವುದು.

ಊ. ವಿಷಯ ನಿರ್ವಾಹಕರು :-

ಪ್ರಾಧಿಕಾರದಲ್ಲಿ ಸ್ವೀಕೃತವಾಗುವ ಎಲ್ಲಾ ಪತ್ರಗಳ ಕುರಿತು ತ್ವರಿತವಾಗಿ ಕಡತದಲ್ಲಿ ಮಂಡಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಮತ್ತು ಈ ಬಗ್ಗೆ ಸಂಬಂಧಿಸಿದ ಸಂಘಗಳಿಗೆ ಮಾಹಿತಿ/ನಿರ್ದೇಶನ ನೀಡುವುದು.

ಋ. ಶೀಘ್ರಲಿಪಿಗಾರರು

ಆಯುಕ್ತರು ಮತ್ತು ಕಾರ್ಯದರ್ಶಿ ನಿರ್ದೇಶನದಂತೆ ಆಪ್ತ ಸಹಾಯಕರಾಗಿ ಕರ್ತವ್ಯ ನಿರ್ವಹಿಸುವುದು, ಆಪ್ತ ಶಾಖೆಯ ನಿರ್ವಹಣೆ, ವಾಹನ ಕಡತ, ದೂರವಾಣಿ ಕಡತ, ಆಯುಕ್ತರ ಹಾಗೂ ಕಾರ್ಯದರ್ಶಿಯವರ ಪ್ರವಾಸಗಳ ಕಡತ ನಿರ್ವಹಣೆ ಮತ್ತು ಆಯುಕ್ತರು ಹಾಗೂ ಕಾರ್ಯದರ್ಶಿಯವರು ವಹಿಸಬಹುದಾದ ಇನ್ನಿತರೆ ಕೆಲಸದ ನಿರ್ವಹಣೆ.

ಎ. ಕಿರಿಯ ಸಹಾಯಕರು

ಆಗಮನ ಮತ್ತು ನಿರ್ಗಮನ ಶಾಖೆಯ ಕಾರ್ಯ ನಿರ್ವಹಣೆ, ಅಂಚೆ ಮತ್ತು ಮುದ್ದಾಂ ಮೂಲಕ ಬರುವ ಪತ್ರಗಳ ಸ್ವೀಕೃತಿ, ಶಾಖೆಯಿಂದ ಹೊರಡಿಸುವ ಪತ್ರಗಳ ರವಾನೆ, ಕಡತ ಮತ್ತು ಪತ್ರಗಳ ಬಾಕಿ ಪಟ್ಟಿ ತಯಾರಿಸುವುದು, ಇತ್ಯಾದಿ ಕೆಲಸಗಳನ್ನು ನಿರ್ವಹಿಸುವುದು.

ಏ. ಕಿರಿಯ ಸಹಾಯಕರು

ಶಾಖೆಗಳಿಗೆ ಸಂಬಂಧಿಸಿದ ಎಲ್ಲಾ ಪತ್ರಗಳನ್ನು ಬೆರಳಚ್ಚು ಮಾಡುವುದು ಮತ್ತು ಕಿರಿಯ ಸಹಾಯಕ ಹುದ್ದೆಯ ಕರ್ತವ್ಯವನ್ನು ನಿರ್ವಹಿಸುವುದು.

**4(1)(B) (III) ಪ್ರಾಧಿಕಾರದಲ್ಲಿ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ.**

ಚುನಾವಣಾ ಪ್ರಾಧಿಕಾರವು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13ಡಿರನ್ವಯ ಚುನಾವಣೆಗೆ ಸಂಬಂಧಿಸಿದಂತೆ ಸಂಘ/ಸಹಕಾರಿಯಿಂದ ಮಾಹಿತಿ ಪಡೆದು, ಮತದಾರರ ಪಟ್ಟಿ ಅಂತಿಮಗೊಳಿಸುವುದರಿಂದ ಮೊದಲ್ಗೊಂಡು, ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವವರೆಗೂ ಕರ್ತವ್ಯ ನಿರ್ವಹಿಸುತ್ತದೆ.

ಪ್ರಾಥಮಿಕ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆ ನಡೆಸಲು ಪ್ರಾಧಿಕಾರದಿಂದ ಚುನಾವಣಾಧಿಕಾರಿಗಳನ್ನು ನೇಮಿಸಲಾಗುತ್ತದೆ. ಚುನಾವಣಾಧಿಕಾರಿಗಳು ಚುನಾವಣೆ ನಡೆಸಲು ರಿಟರ್ನಿಂಗ್ ಅಧಿಕಾರಿಗಳು ಹಾಗೂ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸುತ್ತಾರೆ.

ಚುನಾವಣಾ ಪ್ರಾಧಿಕಾರವು, ಪ್ರೌಢ, ಸಂಯುಕ್ತ ಮತ್ತು ಅಗ್ರ ಸಹಕಾರ ಸಂಘಗಳಿಗೆ/ಸಹಕಾರಿಗಳ ಆಡಳಿತ ಮಂಡಳಿಗೆ ಚುನಾವಣಾಧಿಕಾರಿಗಳು, ರಿಟರ್ನಿಂಗ್ ಅಧಿಕಾರಿಗಳು ಹಾಗೂ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸುತ್ತದೆ.

ಚುನಾವಣೆಗೆ ಸಂಬಂಧಿಸಿದಂತೆ ಬರುವ ಯಾವುದೇ ಪತ್ರಗಳನ್ನು, ದೂರು/ ಮನವಿಗಳನ್ನು ಕಾಯಿದೆ, ಕಾನೂನು ಮತ್ತು ಸಂಘದ ಬೈಲಾಗಳಿಗೆ ಅನುಗುಣವಾಗಿ ಪರಿಶೀಲಿಸಿ ಈ ಬಗ್ಗೆ ಸಂಬಂಧಿಸಿದ ಸಂಘಗಳಿಗೆ/ಸಹಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗುತ್ತದೆ.

**4(1)(B) (IV) ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:-**

ಚುನಾವಣಾ ಪ್ರಾದಿಕಾರವು ಚುನಾವಣಾಧಿಕಾರಿಗಳು, ರಿಟರ್ನಿಂಗ್ ಅಧಿಕಾರಿಗಳು/ಸಹಾಯಕ ರಿಟರ್ನಿಂಗ್ ಅಧಿಕಾರಿಗಳು ಮತ್ತು ಇಲಾಖಾಧಿಕಾರಿಗಳ ಮೂಲಕ ಸಹಕಾರ ಸಂಘಗಳ ಚುನಾವಣೆ ನಡೆಸುವ ಕಾರ್ಯ ನಿರ್ವಹಿಸುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರದಿಂದ ಸೂಕ್ತ ನಿರ್ದೇಶನಗಳನ್ನು ನೀಡಿ ಪ್ರಾಧಿಕಾರದ ಅಧೀಕ್ಷಣೆ, ನಿಯಂತ್ರಣ ಮತ್ತು ನಿರ್ದೇಶನದಡಿಯಲ್ಲಿ ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ಸಹಕಾರ ಸಂಘಗಳ ಚುನಾವಣೆ ನಡೆಸಲು ಕ್ರಮವಿಡಲಾಗುತ್ತಿದೆ.

**4(1)(B) (V)ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಯಮಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು**

ಚುನಾವಣಾ ಪ್ರಾಧಿಕಾರವು ಈ ಕೆಳಗಿನ ಕಾಯ್ದೆ ಮತ್ತು ನಿಯಮಗಳಿಗೆ ಅನುಸಾರವಾಗಿ ಚುನಾವಣಾ ಕಾರ್ಯವನ್ನು ನಡೆಸುತ್ತದೆ.

1) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959
2) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960
3) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997
4) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 2004
5) ಸರ್ಕಾರದಿಂದ ಹೊರಡಿಸಲಾಗುವ ಅಧಿಸೂಚನೆ, ಸುತ್ತೋಲೆ ಮತ್ತು ನಡವಳಿಗಳು
6) ಚುನಾವಣಾ ಪ್ರಾಧಿಕಾರದಿಂದ ಹೊರಡಿಸಲಾದ ಅಧಿಸೂಚನೆ/ಸುತ್ತೋಲೆ ಮತ್ತು ಆದೇಶಗಳು
7) ಸಹಕಾರ ಚುನಾವಣಾ ಕೈಪಿಡಿ
8) ಸಹಕಾರ ಸಂಘಗಳ /ಸಹಕಾರಿಗಳ ಬೈಲಾಗಳು

**4(1)(B) (VI)ಪ್ರಾಧಿಕಾರದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ಪಟ್ಟಿ**

1) ಆದೇಶಗಳು/ ಚುನಾವಣಾಧಿಕಾರಿ/ ರಿಟರ್ನಿಂಗ್ ಆಫೀಸರ್ಸ್/ ಸಹಾಯಕ ರಿಟರ್ನಿಂಗ್ ಆಫೀಸರ್ಸ್ ನೇಮಕಾತಿ ಕುರಿತಾದ ಕಡತಗಳು.
2) ಹಣ ಬಿಡುಗಡೆ/ ಸಿಬ್ಬಂದಿಗಳ ನೇಮಕಾತಿ ಕುರಿತಾದ ಕಡತಗಳು
3) ಆದೇಶ/ ಅಧಿಸೂಚನೆ ಕಡತಗಳು
4) ಮಾಹಿತಿ ಹಕ್ಕು ಕಾಯ್ದೆಗೆ ಸಂಬಂಧಿಸಿದ ಕಡತಗಳು
5) ನ್ಯಾಯಾಲಯಕ್ಕೆ ಸಂಬಂಧಿಸಿದ ಕಡತಗಳು
6) ಲೆಕ್ಕಶಾಖೆಗೆ ಸಂಬಂಧಿಸಿದ ಕಡತಗಳು
7) ಅಧಿಕಾರಿಗಳ/ಸಿಬ್ಬಂದಿಗಳ ವೈಯಕ್ತಿಕ ಕಡತಗಳು
8) ಕಟ್ಟಡ/ಬಾಡಿಗೆ ಒಪ್ಪಂದದ ಕಡತಗಳು
9) ಇತರೆ ಕಡತಗಳು

**4(1)(B)(VII) ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಇರುವಂಥ ಯಾವುದೇ ವ್ಯವಸ್ಥೆಯ ವಿವರ.**

ಸಹಕಾರ ಚುನಾವಣಾ ಪ್ರಾಧಿಕಾರವು ತನ್ನದೇ ಆದ ಜಾಲತಾಣವನ್ನು ಹೊಂದಿರುತ್ತದೆ. www.ceckar.in ಮತ್ತು ಎಲ್ಲಾ ಆದೇಶಗಳು/ಅಧಿಸೂಚನೆಗಳು/ಸುತ್ತೋಲೆಗಳು ವೆಬ್‌ಸೈಟ್‌ನಲ್ಲಿ ಬಿಡುಗಡೆಯಾಗುತ್ತದೆ. ಆಸಕ್ತಿಯುಳ್ಳವರು ಈ ವೆಬ್‌ಸೈಟ್ ಮೂಲಕ ಆಯುಕ್ತರಿಗೆ ತಮ್ಮ ಸಲಹೆಗಳನ್ನು ನೀಡಬಹುದಾಗಿದೆ.

**4(1)(B) (VII1)ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್‌ಗಳ, ಸಮಿತಿಗಳ ಮತ್ತು ಇತರೆ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವೇ? ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವುದೇ?**

ಇಂಥಹ ಯಾವುದೇ ಸಮಿತಿಯನ್ನು ಪ್ರಾಧಿಕಾರವು ರಚಿಸಿರುವುದಿಲ್ಲ.

**4(1)(B) (IX)ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ**

**ಹಾಗೂ4(1)(B) (X)ಅಧಿಕಾರಿ / ನೌಕರರ ಹೆಸರು, ಹುದ್ದೆ ಮತ್ತು ವೇತನದ ವಿವರ.**

ಸಹಕಾರ ಚುನಾವಣಾ ಪ್ರಾಧಿಕರದ ಅಧಿಕಾರಿ/ ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು ಈ ಕೆಳಗಿನಂತಿದೆ. ಖಾಯಂ ಸರ್ಕಾರಿ ನೌಕರರು ಸರ್ಕಾರದ ಆದೇಶದ ರೀತ್ಯಾ ವೇತನ ಪಡೆಯುತ್ತಾರೆ.

| ಕ್ರಸಂ | ಅಧಿಕಾರಿ/ನೌಕರರ ಹೆಸರು ಶ್ರೀ/ ಶ್ರೀಮತಿ | ಹುದ್ದೆಯ ವಿವರ | ವೇತನಶ್ರೇಣಿ | ಒಟ್ಟು ವೇತನ ರೂ. |
|---|---|---|---|---|
| 1. | ಎನ್.ಸಿ.ಮುನಿಯಪ್ಪ | ಆಯುಕ್ತರು | - | 1,72,805 |
| 2. | ನುಸರತ್ ಮುವಾಹಿದಾ ಬೇಗಂ | ಕಾರ್ಯದರ್ಶಿ | 48900-63600 | 92,080 |
| 3 | ಬಿ.ಸಿ. ಶ್ರೀರಂಗಪ್ಪ | ಉಪಕಾರ್ಯದರ್ಶಿ | 36300-53850 | 53,850 |
| 4 | ಟಿ.ಆರ್. ಸಿದ್ದಬಸವಯ್ಯ | ಸಹಕಾರ ಸಂಘಗಳ ಉಪನಿಬಂಧಕರು | 36300-53850 | 62.252 |
| 5 | ಎಂ. ಉಮಾದೇವಿ | ಸಹಕಾರ ಸಂಘಗಳ ಸಹಾಯಕ ನಿಬಂಧಕರು ನಿಯಮ 32 | 21600-40050 | 49,536 |
| 6 | ಆರ್. ನಾಗಲಕ್ಷ್ಮಿ | ಸಹಕಾರ ಸಂಘಗಳ ಸಹಾಯಕ ನಿಬಂಧಕರು ನಿಯಮ 32 | 21600-40050 | 49,661 |
| 7 | ಎಂ.ಬಿ. ಮಂಜುನಾಥ | ಸಹಕಾರ ಸಂಘಗಳ ಸಹಾಯಕ ನಿಬಂಧಕರು ನಿಯಮ 32 | 21600-40050 | 50,864 |
| 8 | ಸಿ.ಬಿ. ನಳಿನಾಕ್ಷಿ | ಸಹಕಾರ ಸಂಘಗಳ ಸಹಾಯಕ ನಿಬಂಧಕರು ನಿಯಮ 32 | 21600-40050 | 46,584 |
| 9 | ವಿ. ಹೇಮಲತಾ | ಸಹಕಾರ ಅಭಿವೃದ್ಧಿ ಅಧಿಕಾರಿ | 21600-40050 | 36,256 |
| 10 | ಸಿ.ಎಸ್. ನಾಗಮಣಿ | ಸಹಕಾರ ಅಭಿವೃದ್ಧಿ ಅಧಿಕಾರಿ | 21600-40050 | 41,236 |
| 11 | ಸಾವಿತ್ರಿ ಗಜಾನನ ಹೆಗಡೆ | ಹಿರಿಯ ಲೆಕ್ಕಪರಿಶೋಧಕರು | 17650-32000 | 45,934 |
| 12 | ತಾರಾ ಎನ್.ಭಟ್ | ಹಿರಿಯ ಲೆಕ್ಕಪರಿಶೋಧಕರು | 17650-32000 | 45,934 |
| 13 | ಆರ್. ಅನಿತಾದೇವಿ | ಹಿರಿಯ ನಿರೀಕ್ಷಕರು/ | 17650-32000 | 29,749 |
| 14 | ಸಿ. ವೀಣಾ | ಶೀಘ್ರಲಿಪಿಗಾರರು | 14550-26700 | 32,155 |

**4(1)(B) (X1) ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮಾಡಲಾದ ವರದಿಯ ವಿವರ 2016-17ನೇ ಸಾಲಿಗೆ ಬಿಡುಗಡೆಯಾದ ಆಯವ್ಯಯದ ವಿವರಗಳು:-**

| ಲೆಕ್ಕ ಶೀರ್ಷಿಕೆ ಅಭಿಯಾಚನೆ ಸಂಖ್ಯೆ ಮತ್ತು ಪಾಲಿನ ಸಂಕೇತ | | ಯೋಜನೆ | ಯೋಜನೇತರ |
|---|---|---|---|
| | 2425-00-004-0-03 | | |
| 03 | ಸಹಕಾರಿ ಚುನಾವಣಾ ಆಯೋಗ | | |
| 002 | ವೇತನ – ಅಧಿಕಾರಿಗಳು | 57.00 | – |
| 003 | ವೇತನ – ಸಿಬ್ಬಂದಿ | 26.00 | – |
| 011 | ತುಟಿ ಭತ್ಯ | 38.00 | – |
| 014 | ಇತರೆ ಭತ್ಯ | 24.00 | – |
| 020 | ವೈದ್ಯಕೀಯ ಭತ್ಯ | 1.00 | – |
| 041 | ಪ್ರಯಾಣ ವೆಚ್ಚಗಳು | 2.00 | – |
| 051 | ಸಾಮಾನ್ಯ ವೆಚ್ಚಗಳು | 28.00 | – |
| 059 | ಇತರೆ ಖರ್ಚುಗಳು | 62.00 | – |
| 071 | ಕಟ್ಟಡ ವೆಚ್ಚಗಳು | 43.00 | – |
| 195 | ಸಾರಿಗೆ ವೆಚ್ಚಗಳು | 19.00 | – |
| | ಜುಮ್ಲಾ | 300.00 | – |

**4(1)(B) (X11) ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ.**

ಪ್ರಾಧಿಕಾರದಿಂದ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ.

**4(1)(B) (X111) ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು.**

ಅನ್ವಯಿಸುವುದಿಲ್ಲ.

**4(1)(B) ) (X1V) ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದ ವಿವರಗಳು**

ಸಹಕಾರ ಚುನಾವಣಾ ಪ್ರಾಧಿಕಾರವು ತನ್ನದೇ ಆದ ಜಾಲತಾಣವನ್ನು ಹೊಂದಿರುತ್ತದೆ. www.ceckar.in ಮತ್ತು ಎಲ್ಲಾ ಆದೇಶಗಳು/ಅಧಿಸೂಚನೆಗಳು/ಸುತ್ತೋಲೆಗಳು ವೆಬ್‌ಸೈಟ್‌ನಲ್ಲಿ ಬಿಡುಗಡೆಯಾಗುತ್ತದೆ.

**4(1)(B) (XV) ಅಧಿಕಾರಿ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳು**

ಪ್ರಸ್ತುತ ಪ್ರಾಧಿಕಾರವು ಸಾರ್ವಜನಿಕರ ಸೌಲಭ್ಯಕ್ಕಾಗಿ ಪ್ರತ್ಯೇಕವಾದ ಗ್ರಂಥಾಲಯ ವ್ಯವಸ್ಥೆಹೊಂದಿರುವುದಿಲ್ಲ. ಆದರೆ ಸಾರ್ವಜನಿಕರು ಕಛೇರಿಯ ಮುಖ್ಯಸ್ಥರು ಅಥವಾ ಸಾರ್ವಜನಿಕ ಸಂಪರ್ಕಾಧಿಕಾರಿಯಿಂದ ಅಗತ್ಯ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

**4(1)(B) (XVI)ಸಾರ್ವಜನಿಕ ಮಾಹಿತಿ ಅಧಿಕಾರಿಗಳ, ಪದನಾಮಗಳು ಮತ್ತು ವಿವರ.**

ಮಾಹಿತಿ ಹಕ್ಕು ಪ್ರಾಧಿಕರದ ಸಾರ್ವಜನಿಕ/ ಸಹಾಯಕ ಸಾರ್ವಜನಿಕ ಮತ್ತು ಮೇಲ್ಮನವಿ ಪ್ರಾಧಿಕಾರ ಮಾಹಿತಿ ಈ ಕೆಳಗಿನಂತಿದೆ.

| ಕ್ರ.ಸಂ. | ಕಛೇರಿ | ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿಯಾಗಿ ನೇಮಕ ಮಾಡಿರುವ ಅಧಿಕಾರಿಯ ಪದನಾಮ | ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ನೇಮಕ ಮಾಡಿರುವ ಅಧಿಕಾರಿಯ ಪದನಾಮ | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| 1. | ಸಹಕಾರ ಚುನಾವಣಾ ಪ್ರಾಧಿಕಾರದ ಕಛೇರಿ | ಸಹಕಾರ ಅಭಿವೃದ್ಧಿ ಅಧಿಕಾರಿ ಸಿಬ್ಬಂದಿ ಶಾಖೆ, ಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು | ಸಹಕಾರ ಸಂಘಗಳ ಉಪ ನಿಬಂಧಕರುಸಹಕಾರ ಚುನಾವಣಾ ಪ್ರಾಧಿಕಾರ ಬೆಂಗಳೂರು | ಕಾರ್ಯದರ್ಶಿ ಸಹಕಾರ ಚುನಾವಣಾ ಪ್ರಾಧಿಕಾರ |

(ಎನ್.ಸಿ.ಮುನಿಯಪ್ಪ)
ಸಹಕಾರ ಚುನಾವಣಾ ಪ್ರಾಧಿಕಾರ